ಸತ್ಯವಾದಿ
SATYAVADI

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಆಫ್ರಿಕಾ ಮುಷ್ಠರಗಾರರ ಮೇಲೆ ಗುಂಡಿನ ಸುರಿಮಳೆ !

ಸೆಮಿನಾರ್

ಮೈಸೂರು, ನ 3 : ನಿನ್ನೆ ದಿವಸ ಮಧ್ಯಾಹ್ನ ಭಾರತ ಸರ್ಕಾರದ ವಿದ್ಯಾ ಸಚಿವರಾದ ಜನಾಬ್ ಮೌಲಾನ ಅಬುಲ್ ಕಲಾಂ ಆಜಾದ್ ಅವರು ವಿಶ್ವಸಂಸ್ಥೆಯ ನೇತೃತ್ವದಲ್ಲಿ ಸಮಾವೇಶಗೊಳ್ಳುವ ವಯಸ್ಕ ಶಿಕ್ಷಣ ಚರ್ಚಾಗೋಷ್ಠಿಯ ಉದ್ಘಾಟನೆಯನ್ನು ನೆರವೇರಿಸಿದರು.

ಮೈಸೂರು ವಿದ್ಯಾ ಸಚಿವ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿದರು.

ಉದ್ಘಾಟನೆಯ ಭಾಷಣವನ್ನು ಸಚಿವರು ಉರ್ದುವಿನಲ್ಲಿ ಮಾಡಿದರು.

ನುಹಿಳೆಯರಿಂದ 'ಅಖಿಲ ಜನನಿ ಮಾತರಂ' ಮುಂತಾದ ಪ್ರಾರ್ಥನಾ ಗೀತೆಗಳನಂತರ ಕಾರ್ಯಕ್ರಮ ಉಪಕ್ರಮವಾಯಿತು.

ಜಗನ್ಮೋಹನ ಅರಮನೆ ವಿದ್ವದ್ವೀಪಗಳಿಂದ ಕಂಗೊಳಿಸುತ್ತಿತ್ತು. ವಿಷ್ಯದ ಹದಿನೆಂಟು ರಾಷ್ಟ್ರಗಳ ಪ್ರತಿನಿಧಿಗಳು ಮತ್ತು ಆಹ್ವಾನಿತರಿಂದ ಸಭೆ ತುಂಬಿ ಹೋಗಿತ್ತು.

ವಿಶ್ವಸಂಸ್ಥೆ ಡೈರೆಕ್ಟರ್ ಜನರಲ್‌ರವರ ಸಂದೇಶವನ್ನು ಡಾ || ಎಫ್. ರೆಕ್ಸ್‌ರವರು ಪಠಿಸಿದರು.

ಸಚಿವ ಆಜಾದ್‌ರವರು ಗೋಷ್ಠಿಯನ್ನು ಉದ್ಘಾಟಿಸುತ್ತಾ : ವಿದ್ಯಾಭ್ಯಾಸ ವಿಷಯದಲ್ಲಿ ಮಕ್ಕಳಿಗಿಂತ ವಯಸ್ಕರಿಗೆ ಅಧಿಕ ಶ್ರದ್ಧೆ ವಹಿಸುವುದು ಅಗತ್ಯ. ಮಾನವತೆಯ ಪೂರ್ಣತೆಯನ್ನು ಒದಗಿಸುವ ಶಿಕ್ಷಣವೆ ಸಾಮಾಜಿಕ ಶಿಕ್ಷಣ. ಕಾರ್ಯಕ್ರಮ ಸಫಲವಾಗಲು ಶಿಕ್ಷ

ಫಟಿಕೋತ್ಸವ

ಮೈಸೂರು, ನ 3 : ಮೈಸೂರು ವಿಶ್ವವಿದ್ಯಾನಿಲಯ ಫಟಿಕೋತ್ಸವ ಈ ಬೆಳಿಗ್ಗೆ ಜರುಗಿತು.

ಭಾರತ ಸರ್ಕಾರದ ವಿದ್ಯಾ ಸಚಿವ ಮಾನ ಮೌಲಾನಾ ಅಬುಲ್ ಕಲಾಂ ಆಜಾದ್‌ರವರಿಗೆ ಡಾಕ್ಟರ್ ಆಫ್ ಲೆಟರ್ಸ್ ಗೌರವ ಪ್ರಶಸ್ತಿಯನ್ನು ಕೊಡಲಾಯ್ತು

ಭಾರತ ಸರ್ಕಾರದ ಕೈಗಾರಿಕಾ ಸಚಿವರಾದ ಡಾ. ಶಾಂಪ್ರಸಾದ ಮುಖರ್ಜಿಯವರು ಪದವೀಧರರಿಗೆ ಉಪದೇಶ ಭಾಷಣ ಮಾಡುತ್ತಾ : ವಿಶ್ವದೊಡನೆ ನಿಮ್ಮ ಅನುಭವಸಂಪತ್ತು ಹೆಚ್ಚಿದ ಹೊರತು ನಿಮ್ಮ ವಿದ್ಯಾಭ್ಯಾಸ ಮುಗಿದಂತಲ್ಲ ವಿಶ್ವವಿದ್ಯಾನಿಲಯದಿಂದ ನೀವೀಗ ಜೀವನದ ತರಬೇತಿ ಪ್ರದೇಶಕ್ಕೆ ಪ್ರವೇಶಿಸುತ್ತಿರುವಿರಿ. ನಿಮಗೆ ಸನ್ಮಂಗಳವಾಗಲಿ. ತಾತ್ಕಾಲಿಕ ತೊಂದರೆಗಳಿಗೆ ಅವೆಷ್ಟೆ ದೊಡ್ಡದಿರಲಿ ಎದೆಗುಂದದಿರಿ. ನೀವು ಪಡೆದಿರುವ ತರಬೇತಿಯಿಂದ, ಮೈಸೂರಿಷ್ಟೇ ಅಲ್ಲ, ಭಾರತದ ಕೀರ್ತಿಗೂ ಸಹಾಯಕವಾಗಲಿ ಎಂದರು

———

ಧರ್ಮ ಮಾರ್ಗವನ್ನು ಪ್ರಧಾನವನ್ನಾಗಿ ಕಾಣುವ ದಾಕ್ಷಿಣ್ಯಕ್ಕೆ ಮಹತ್ವವನ್ನು ಕೊಡದೆ ಕಾರ್ಯಾಸಕ್ತವಾಗುವ ಸಚಿವ ಮಂಡಲ ರಚನೆಯಾಗಬೇಕೆಂಬುದೆ ನನ್ನ ಆಶಯ ಎಂದು ಮೈಸೂರಿನಲ್ಲಿ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಉಪಧುರೀಣ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ

ಸಂಮೇಳನ ಡೈರೆಕ್ಟರ್ ಮಾಂಲಾಂಗ್ ಗೋಷ್ಠಿ ಕ್ರಿಯಾಶಕ್ತವಾಗುವಂತೆ ಕಾರ್ಯಪ್ರಸಕ್ತವಾಗದೇಕೆಂದರು.

ರಾಷ್ಟ್ರ ನೀತಿಯೆ

ತಿಲ್ಲಿ ಮುಷ್ಕರಗಾರರ ಮೆ ಗೋಳೀಬಾರು

ಟೌ ನ 1 — ಮುನ್ಸೆವಿಲ್ಲೆ ಮುಷ್ಕರಗಾರ ದೇಶೀಯರು ಗಲಭ ಮಾಡಿದರೆಂದು ಪೋಲೀಸರು ಗುಂಡು ಹಾರಿಸಿದರು ಮೂರು ಮಂದಿ ಸತ್ತು ಅನೇಕರು ಗಾಯಗೊಂಡರು.

ಅಮೇರಿಕಾದಲ್ಲಿ ೭ ವರ್ಷದ ನೆಹ್ರು

ಅಮೇರಿಕಾದಲ್ಲಿ 7 ವರ್ಷ ವಯಸಿನ ಹುಡುಗನೊಬ್ಬನ ಹೆಸರು ನೆಹ್ರು. ಇವನನ್ನು ಪಂಡಿತ್ ಅಂತಲೂ ಕರೆಯುತ್ತಾರೆ ಈ ಹೆಸರಿಗೆ ಸಂಬಂಧಿಸಿದ ಒಂದು ಕಥೆ. 7 ವರ್ಷಗಳ ಹಿಂದೆ ಬ್ರಿಟಿಷರು ಪಂ || ನೆಹರುವನ್ನು ಜೈಲಿಗೆ ಹಾಕಿದ್ದು ಸರಿಯಲ್ಲವೆಂದು ಈ ಹುಡುಗನ ತಂದೆಗೆ ಕೋಪಬಂದು, ಆ ಮಹಾನುಭಾವನ ಹೆಸರನ್ನೇ ತನ್ನ ಮಗನಿಗಿಟ್ಟನಂತೆ.

ನೆಹರೂ ವಿಷಾದ

ಸ್ಯಾನ್ ಫ್ರಾನ್ಸಿಸ್ಕೊ ನ 1— ನಿನ್ನೆ ಕ್ಯಾಲಿಫೋರ್ನಿಯಾದಲ್ಲಿ ಗ್ರೀಕ್ ಥಿಯೇಟರಿನ ತುಂಬ ಸೇರಿದ್ದ ಬಾಲಕ ಬಾಲಕಿಯರನ್ನುದ್ದೇಶಿಸಿ ಭಾಷಣ ಮಾಡುತ್ತ ನಾನೊಬ್ಬ ರಾಜಕಾರಣಿಯೂ ಮುಖ್ಯ ಮಂತ್ರಿಯಾದ ಆದದಕ್ಕಾಗಿ ವಿಷಾದಿಸುತ್ತಿದ್ದೇನೆ ಎಂದು ವಿರಕ್ತಿಪೂರ್ಣದಿಂದ ಮಾತನಾಡಿದರು

ತುಟ್ಟೀಭತ್ಯ ನಿಲ್ಲಿಸಲು

ಅಹಮದಾಬಾದು ಹತ್ತಿ ಗಿರಣಿ ಮಾಲೀಕರ ಸಂಘದವರು ಇನ್ನೆರಡು ತಿಂಗಳಕಡ ನಂತರ ತಾವು ಕೆಲಸಗಾರರಿಗೆ ಇದುವರೆಗೆ ಕೊಡುತ್ತಿರುವ ತಟ್ಟೀ ಭತ್ಯ ನಿಲ್ಲಿಸುವುದಾಗಿ ಹತ್ತಿ ಗಿರಣಿ ಕಾರ್ಮಿಕ ಸಂಘಕ್ಕೆ ನೋಟೀಸು ಕೊಟ್ಟಿದಾರೆಂದು ತಿಳಿಯಬಂದಿದೆ

೧೪ ಆಣೆ ವ್ಯಾಜ್ಯ, ಭೀಕರ ಕೊಲೆ

ಸಾಗರದಿಂದ ಬಂದಿರುವ ಭೀಕರ ವಾರ್ತೆ. ಕಳೆದ ತಾ || 30ರಲ್ಲಿ ಬೇರೆ ಬೇರೆ ಮತಸ್ಥರಾದ ಇಬ್ಬರಲ್ಲಿ ಒಬ್ಬನು 14 ಆಣೆ ಕೊಡಬೇಕಾಗಿದ್ದು ಕೊಡುವುದಕ್ಕೆ ತಕರಾರು ಮಾಡಿದ್ದರಿಂದ ಇಬ್ಬರಿಗೂ ಜಗಳವಾಗಿ ತತ್ಪರಿಣಾಮವಾಗಿ ಅವನು ಚೂರಿಯಿಂದ ಇರಿಯಲ್ಪಟ್ಟನು.

——

ಬೊಂಬಾಯಿ— ಭಾರತ ಸರಕಾರಕ್ಕೆ ಕೆಲ ಪದಾರ್ಥಗಳ ಆಮದುವನ್ನು ಬಂಧಿಸಿರುವದರಿಂದ ಆ ಸಂಬಂಧದ ಜಾ

ಚಿತ್ರದ ಹುಡುಗಿ

ಸಿಗರೇಟ್

ಸೆಲಿನಾ ವಾಲ್ಟರ್ಸ್ ಎಂಬ ಚಿತ್ರ ತಾರೆಯಾಗಿದ್ದ 23 ವರ್ಷದ ಹುಡುಗಿಯು ಅಮೇರಿಕಾದಿಂದ ತೆಹರಾನಿಗೆ ಪ್ರಯಾಣ ಬೆಳೆಸಿದ್ದಾಳೆ. ಈ ಪ್ರಯಾಣಕ್ಕೆ ಇವಳ ಚಿತ್ರ ನೋಡಿ ಮೋಹಿಸಿದ ಇರಾಣದ ರಾಜಪುತ್ರನ ಪ್ರಣಯವೇ ಕಾರಣ ಚೆಸ್ಟರ್‌ಫೀಲ್ಡ್ ಸಿಗರೇಟುಗಳ ಜಾಹಿರಾತುಗಳಲ್ಲಿ ಸೆಲಿನಾಳ ಚಿತ್ರವು ಅಮೇರಿಕಾ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಇವಳ ಚಿತ್ರವೊಂದನ್ನು ಅಮೇರಿಕಾ ಅಧಿಕಾರಿ ಇರಾನಿನ ರಾಯಭಾರಿಗೆ ಕೊಟ್ಟನು; ಅವನು ಅದನ್ನು ತೆಹರಾನಿಗೆ ಕಳಿಸಿದನು. ಈಗ ತೆಹರಾನದಿಂದ ಇವಳಿಗೆ ಆಮಂತ್ರಣ : ಇವಳು ಅಲ್ಲಿ ಅರಮನೆ ಅತಿಥಿ!
ಪುನಃ ಕೂಡಿಕೊಂಡಿದ್ದಾರೆ.

ಸತಿ ಪತಿ ರಾಜಿ

ಇಟಲಿಯ ಪದಚ್ಯುತ ಉಂಬರಿಯೊ ರಾಜನಿಗೂ ಆತನ ರಾಣಿಗೂ ಮೂರು ವರ್ಷಗಳಿಂದ ಮನಸ್ತಾಪವಾಗಿ ದೂರ ದೂರ ಇರುತ್ತಿದ್ದರು. ಈಗ ಇವರಿಬ್ಬರೂ ಸ್ವಿಟ್ಜರ್ಲೆಂಡಿನಲ್ಲಿ ರಾಜಿಯಾಗಿ

Edited, Printed and Published by M. S. Krishna Rao, at the Satyavadi Press, Chamrajpuram Mysore

...mands

— ಬೆಳಗಿನ ಪ್ರದರ್ಶನ —

4–11–49 ರಿಂದ

ಸೀಕ್ರೆಟ್ ಕೋಡ್

ರಿಪಬ್ಲಿಕ್ ಸೀರಿಯಲ್

Secret Code

ವುಡ್ ಲ್ಯಾಂಡ್ಸ್

29–10–49 ರಿಂದ

Doosri Shadi

ಮುಂತಾಜ್ ಶಾಂತಿ, ಕುಮಾರ್
ಪ್ರಮೀಳಾ, ಡೇವಿಡ್ ಪಾತ್ರವಹಿಸಿರುವ

ದೂಸ್ರಿ ಶಾದಿ

ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಆಟಗಳು

L. N. Press

for Quality Printing

Sivarampet, Mysore

Protect the Cow

ಗೋರಕ್ಷಣೆ ನಡೆಯಲಿ

ಸತ್ಯವಾದಿ

ದಿನಪತ್ರಿಕೆ

ತಿಂಗಳಿಗೆ ಸ್ಥಳದಲ್ಲಿ 6 ಆಣೆಗಳು
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ



— ಇಂಗ್ಲಿಷ್ ಕಡಲ್ಗಾಲವೆ ದಾಟಲು ಮೂದಲ ಪ

ಮೈಸೂರು ಅಪೇರಾ ಟಾಕೀಸ್‌ನಲ್ಲಿ

4–11–1949 ರಿಂದ ಅಮೋಘ ಆರಂಭ

ಸ್ವಾಸ್ತಿಕ್ ವರ :

ಧರ್ಮಾಂಗದ

ಅಮೋಘ ತೆಲುಗು ಚಿತ್ರ

ಪಾತ್ರವರ್ಗ : * ಕೃಷ್ಣವೇಣಿ, * ಮುಪ್ಪೈಂದ್ರಮಣಿ, * ಡಾ. ಸುಬ್ಬಾ[illegible]ರ್ತಿ